# ಕಲರ್ ಕಲರ್ ಮನುಷ್ಯರು ಹುಟ್ಟಿದ್ದರೆ..!

**ತಮ್ಮ ಸಹಜನಟನೆಯಿಂದಲೇ ಗಮನಸೆಳೆಯುವ ಭೂಮಿ ಶೆಟ್ಟಿ, ಉತ್ತಮ ಪಾತ್ರ ಸಿಕ್ಕರೆ ಕನ್ನಡವನ್ನೇ ಬೆಳಗಬಲ್ಲ ಪ್ರತಿಭೆ.**

■ ಪದ್ಮನಾಭ ಭಟ್

'ನಮ್ ಜನರಿಗೆ ಬೆಳ್ಳಗಿನ ಮೈಬಣ್ಣವೇ ಶ್ರೇಷ್ಠ ಅಂತ ಭಾವನೆ ಇದೆಯಲ್ಲ, ಒಂದೊಮ್ಮೆ ಕಪ್ಪು, ಬಿಳಿ ಅನ್ನೋದು ಬಿಟ್ಟು, ಕೆಂಪು ನೀಲಿ, ಹಳದಿ ಹೀಗೆ ಕಲರ್ ಕಲರ್ ಬಣ್ಣದಲ್ಲಿ ಮನುಷ್ಯರು ಹುಟ್ಟಿದ್ರೆ ಆಗ ಇವ್ರೆಲ್ಲ ಏನ್ ಮಾಡ್ತಿದ್ರೋ ಏನೋ...'

ಹೀಗೆಂದು ತಮ್ಮ ಸಹಜಸುಂದರ ನಗುವನ್ನು ಚೆಲ್ಲಿದರು ಭೂಮಿ ಶೆಟ್ಟಿ. ಅವರ ಈ ನಗುವಿನ ಆಳದಲ್ಲಿ ತುಸು ವಿಷಾದವೂ ಇತ್ತು. ಮನುಷ್ಯನ ಪ್ರತಿಭೆಯನ್ನು ಕಡೆಗಣಿಸಿ ಮೆರೆದಾಡುವ ಬಾಡಿಶೇಮಿಂಗ್, ವರ್ಣತಾರತಮ್ಯದ ಬಗ್ಗೆ ತಿರಸ್ಕಾರವಿತ್ತು. ಹಾಗೆಯೇ ಈ ಯಾವ ಸಣ್ಣತನಗಳೂ ತನ್ನ ಸಾಧನೆಯ ದಾರಿಗೆ ಮುಳ್ಳಾಗಲಾರವು ಎಂಬ ಆತ್ಮವಿಶ್ವಾಸವೂ ಇತ್ತು.

ಕುಂದಾಪುರದ ಗಂಟಿಹೊಳೆ ಎನ್ನುವ ಪುಟ್ಟ ಊರಿನಲ್ಲಿ ಹುಟ್ಟಿ ಬೆಳೆದ ಭೂಮಿಗೆ ಬಾಲ್ಯದಲ್ಲಿಯೇ ಯಕ್ಷಗಾನ, ಭರತನಾಟ್ಯದ ಮೇಲೆ ಆಸಕ್ತಿ. ಕಲೆಯ ಗಂಧವನ್ನು ಉಸಿರಾಡುತ್ತಲೇ ಬೆಳೆದ ಅವರು ಬೆಂಗಳೂರಿಗೆ ಬಂದಿದ್ದು ಇಂಜಿನಿಯರಿಂಗ್ ಓದಲು. ಕಾಲೇಜು ದಿನಗಳಲ್ಲಿ ತನ್ನ ಸ್ನೇಹಿತರ ಜೊತೆಗೂಡಿ ಫೋಟೊಶೂಟ್ ಮಾಡುತ್ತಿದ್ದ ಅವರಲ್ಲಿ ಮಾಡೆಲಿಂಗ್ ಬಗ್ಗೆ ಆಸಕ್ತಿ ಮೊಳೆಯಿತು. ಅವರ ಸ್ನೇಹಿತರ ಬಳಗದ ಮೂಲಕವೇ ಕೇರಳದ 'ಇನ್‌ಸ್ಪಾಯರ್' ಎಂಬ ಪತ್ರಿಕೆಗೆ ಫೋಟೊಶೂಟ್ ಮಾಡಿದ ಮೇಲೆ ಅವರಿಗೆ ನಟನೆಯ ಕಡೆಗೂ ಒಲವು ಬೆಳೆಯಿತು. ಆಗಿನಿಂದಲೂ ಆಡಿಷನ್‌ಗಳನ್ನು ಕೊಡುತ್ತಲೇ ಇದ್ದರು. ಕೊನೆಯಲ್ಲಿ ಅವರ ಕೈಹಿಡಿದಿದ್ದು 'ಕಿನ್ನರಿ' ಧಾರಾವಾಹಿ. ಕಲರ್ಸ್ ವಾಹಿನಿಯ 'ಕಿನ್ನರಿ' ಧಾರಾವಾಹಿಯ ಮುಖ್ಯಪಾತ್ರದಲ್ಲಿನ ಅವರ ನಟನೆ ಮನೆಮನೆಗೂ ತಲುಪಿತು. ನಂತರ ತೆಲುಗಿನ ಒಂದು ಧಾರಾವಾಹಿಯಲ್ಲಿಯೂ ನಟಿಸಿದರು. ಅದಾದ ಮೇಲೆ ಬಿಗ್‌ಬಾಸ್ ಕನ್ನಡದ ಏಳನೇ ಸೀಸನ್‌ನಲ್ಲಿ ಭೂಮಿ ಶೆಟ್ಟಿ ಅವರ ವ್ಯಕ್ತಿತ್ವದ ಹಲವು ಆಯಾಮಗಳು ಕನ್ನಡಿಗರಿಗೆ ತಿಳಿದವು. ಅವರು ಆ ಸೀಸನ್‌ನಲ್ಲಿ ಅಂತಿಮಘಟ್ಟದವರೆಗೂ ಹೋಗಿ ಬಂದರು. ನಂತರ 'ಮಜಾಭಾರತ' ಎಂಬ ರಿಯಾಲಿಟಿ ಷೋ ಹೋಸ್ಟ್ ಆಗಿಯೂ ಕೆಲಸ ಮಾಡಿದರು.

ಮೊದಲ ಲಾಕ್‌ಡೌನ್‌ನಲ್ಲಿ ಊರಿಗೆ ಹೋಗಿ ಸಿಕ್ಕಿಹಾಕಿಕೊಂಡಿದ್ದ ಭೂಮಿಗೆ 'ಇಕ್ಕಟ್' ಮೂಲಕ ಸಿನಿಮಾ ನಾಯಕಿಯಾಗಿ ನಟಿಸುವ ಅವಕಾಶವೂ ಸಿಕ್ಕಿತು. 'ಇಕ್ಕಟ್' ಇತ್ತೀಚೆಗಷ್ಟೆ ಅಮೆಜಾನ್ ಪ್ರೈಮ್‌ನಲ್ಲಿ ಬಿಡುಗಡೆಯಾಗಿ ಜನಮೆಚ್ಚುಗೆ ಗಳಿಸಿದೆ. ಆ ಚಿತ್ರಕ್ಕೆ ಸಿಕ್ಕಿರುವ ಪ್ರತಿಸ್ಪಂದನವೂ ಭೂಮಿಯನ್ನು ವಿನೀತಗೊಳಿಸಿದೆ.

ಅತಿರೇಕದ ನಟನೆಯಲ್ಲಿಯೇ ಹಾಸ್ಯ ಹುಟ್ಟಿಸುವುದು ಸಾಧ್ಯ ಎಂಬ ಜನಪ್ರಿಯ ನಂಬಿಕೆಯ ನಡುವೆ ಭೂಮಿ ಶೆಟ್ಟಿ 'ಇಕ್ಕಟ್' ಸಿನಿಮಾದಲ್ಲಿನ ಸಹಜನಟನೆ ಗಮನಸೆಳೆಯುವಂತಿದೆ.

'ನನಗೆ ಯಾವುದೇ ಪಾತ್ರ ಸಿಗಲಿ, ಆದಷ್ಟೂ ಸಹಜವಾಗಿ ಅಭಿನಯಿಸಬೇಕು ಎಂದು ಆಸೆ. 'ಇಕ್ಕಟ್' ಸಿನಿಮಾದಲ್ಲಿ ನನ್ನ ಪಾತ್ರವೇ ಅಂಥದ್ದು.

